# ಶರವೇಗದಿಂದ ವರವೇಗದತ್ತ

2021ರಲ್ಲಿ ಜೀವನ ಮತ್ತೆ ಸುಸ್ಥಿತಿಗೆ ಮರಳಲಿ. ನಿಸರ್ಗದ ಕೋಪಕ್ಕೆ ತುತ್ತಾಗದಂತೆ ಎಲ್ಲ ಪ್ರಾಣಿ, ಪಕ್ಷಿ, ವೃಕ್ಷ ಸಂಕುಲದ ಸ್ವಾತಂತ್ರ್ಯವನ್ನೂ ಅರ್ಥೈಸಿಕೊಂಡು ಹೊಸಹಾದಿಯತ್ತ ಹೊಸಬಾಳಿನತ್ತ ಹೊಸ ವರ್ಷ ನಮ್ಮೆಲ್ಲರನ್ನು ಕೊಂಡೊಯ್ಯಲಿ.



■ ಪ್ರವೀಣ
ಕಥೆಗಾರ-ಕವಿ, ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶಿ

ಮೊದಲ ಹೆಜ್ಜೆಯನ್ನು ನಂಬಿಕೆಯಿಂದ ಮುಂದಕ್ಕಿಡಿ. ನೀವು ಎಲ್ಲ ಮೆಟ್ಟಿಲುಗಳನ್ನು ನೋಡುವ ಅಗತ್ಯವಿಲ್ಲ. ಮೊದಲ ಹೆಜ್ಜೆಯನ್ನು ನೋಡಿದರೆ ಸಾಕು.
-ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್

ಯಾರ ಅಂಕೆಗೂ ಸಿಗದಂತೆ ಶರವೇಗದಲ್ಲಿ ಓಡುತ್ತಿದ್ದ ಮನುಷ್ಯ ಸಂಕುಲದ ಟ್ರೇನನ್ನು ಅನಿರೀಕ್ಷಿತವಾಗಿ ಒಮ್ಮೆಲೆ ನಿಲ್ಲಿಸಿದಂತೆ ಬಂದೆರಗಿದ್ದು 2020. ತಲೆ ಜಜ್ಜಿಕೊಂಡವರೆಷ್ಟೋ, ಕಾಲು ಉಳುಕಿಸಿಕೊಂಡವರೆಷ್ಟೋ, ಕೈ ಕಳೆದುಕೊಂಡವರೆಷ್ಟೋ, ಜೀವವನ್ನೇ ತೆತ್ತವರೆಷ್ಟೋ? ಆದರೂ ಮನುಷ್ಯನಿಗೆ ಬುದ್ಧಿ ಬಂದ ಹಾಗೆ ಕಾಣುತ್ತಿಲ್ಲ. 2020ನೇ ವರ್ಷವಾದರೂ ಮನುಷ್ಯನಿಗೆ ಬುದ್ಧಿ ನೀಡಲಿ. ನಿಸರ್ಗವನ್ನು ತನ್ನ ಸ್ವಂತ ಸೊತ್ತಿನಂತೆ ಭಾವಿಸಿ, ನಿಷ್ಕಾಳಜಿಯಿಂದ ಬಳಸುವುದರಿಂದ ತನ್ನ ಅಸ್ತಿತ್ವಕ್ಕೇ ಧಕ್ಕೆ ಎಂಬುದನ್ನು ಅರಿಯಲಿ. ಇತರ ಎಲ್ಲ ಪ್ರಾಣಿ, ಪಕ್ಷಿ, ಗಿಡ, ಮರಗಳೊಂದಿಗೆ ಒಟ್ಟಾಗಿ ಏಳಿಗೆ ಹೊಂದುವ ಮನಸ್ಸನ್ನು ಪಡೆಯಲಿ. ಜಗತ್ತಿನ ರಾಷ್ಟ್ರಗಳು ಸ್ಪರ್ಧೆ ಮಾಡದೇ ಒಂದಕ್ಕೊಂದು ಪೂರಕವಾಗಿ ಬೆಳೆಯುತ್ತ ನಿಸರ್ಗಕ್ಕೆ ಕೃತಜ್ಞತೆ ಸಲ್ಲಿಸಲಿ.

ಲಾಕ್‌ಡೌನ್ ಹೊಡೆತದಿಂದ ಇನ್ನೂ ಜಗತ್ತು ತತ್ತರಿಸುತ್ತಿರುವಾಗ ಸರ್ಕಾರಗಳು ಜನರ ಕಷ್ಟ ಕಾರ್ಪಣ್ಯಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಹೋಗಲಾಡಿಸುವುದರಲ್ಲಿ ಗಮನ ಹರಿಸಬೇಕೇ ಹೊರತು, ಮುಂದೂಡಬಹುದಾದ ಐಷಾರಾಮಿ ಖರ್ಚುಗಳಲ್ಲಿ ಹಣ ವ್ಯಯಿಸಬಾರದು. ಶಹರಗಳಿಂದ ತಂತಮ್ಮ ಹಳ್ಳಿಗಳಿಗೆ ವಾಪಸು ಬಂದಿರುವ ದುಡಿಯುವ ವರ್ಗಕ್ಕೆ ಅವರಿದ್ದಲ್ಲಿಯೇ ಉತ್ಪಾದನೆ ಮತ್ತು ಸಂಪಾದನೆ ಮಾಡುವಂತಹ ಯೋಜನೆಗಳನ್ನು ಹಮ್ಮಿಕೊಳ್ಳಬೇಕಿದೆ. ರೈತರ ಮಾತುಗಳನ್ನು ಆಲಿಸಿ ಅವರ ಜೀವನವನ್ನು ಹಸನುಗೊಳಿಸಬೇಕಿದೆ. ಕೆಲಸ ಕಳೆದುಕೊಂಡವರ, ಚಿಕ್ಕ ಪುಟ್ಟ ವ್ಯಾಪಾರ ವಹಿವಾಟುಗಳಲ್ಲಿ ನಷ್ಟ ಅನುಭವಿಸಿರುವ, ರಸ್ತೆ ಬದಿ ವ್ಯಾಪಾರಗಳನ್ನು ನಿಲ್ಲಿಸಿರುವ, ಹೊಟ್ಟೆಪಾಡಿಗಾಗಿ ಕಷ್ಟಪಡುತ್ತಿರುವ ಎಲ್ಲ ಜನಕ್ಕೂ ಮತ್ತೆ ಸ್ಥಿರ ಜೀವನದ ಅವಕಾಶಗಳನ್ನು ಒದಗಿಸಬೇಕಿದೆ. ಮತ್ತೊಮ್ಮೆ ಜೀವನ ಸರಾಗವಾಗಬೇಕಿದೆ.

ಮತ್ತೆ ಮೊದಲಿನಂತಾಗುವ ಅವಸರದಲ್ಲಿ, ಆರೆಂಟು ತಿಂಗಳಲ್ಲಿ ಕಳೆದುಕೊಂಡದ್ದನ್ನು ಒಮ್ಮೆಲೇ ವಾಪಸು ಪಡೆಯುವ ಅವಸರ ಮೂಡದಿರಲಿ. ನಿಧಾನಕ್ಕೆ ಕಾಳಜಿಯಿಂದ ಒಂದೊಂದೇ ಹೆಜ್ಜೆಗಳನ್ನು ಇಡುತ್ತ ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು, ಮತ್ತೆ ಅವುಗಳನ್ನೇ ಪುನರಾವರ್ತಿಸದೆ ಹೊಸ ಹಾದಿಗಳನ್ನು ಹುಡುಕಬೇಕಿದೆ.

ನಿಂತುಹೋದ ಜೀವನ ಅನೇಕ ಹೊಸ ಪಾಠಗಳನ್ನು ಕಲಿಸಿದೆ. ಹೊಸ ದಾರಿಗಳಲ್ಲಿ ನಡೆಯುವ ಕಲೆಯನ್ನು ಕಲಿಸಿದೆ. ಅನಗತ್ಯ ಖರ್ಚುಗಳನ್ನು ಮಿತಗೊಳಿಸಿದೆ. ಆದರೆ ಅದರೊಡನೆ ಅನೇಕ ಹೊಸ ಸಮಸ್ಯೆಗಳನ್ನು ಹುಟ್ಟುಹಾಕಿದೆ. ಅವುಗಳಿಗೆಲ್ಲ ಪರಿಹಾರ ಕಂಡುಕೊಳ್ಳಬೇಕಿದೆ.

2021 ಅನೇಕ ವಿಧಗಳಿಂದ ವಿಭಿನ್ನವಾದ ವರ್ಷವಾಗಲಿದೆ. ಜನರ ಮುಂದೆ, ಸರ್ಕಾರದ ಮುಂದೆ ಅನೇಕ ಸವಾಲುಗಳನ್ನು ಎಸೆಯಲಿದೆ. ಜಾತಿ, ಧರ್ಮ, ಪ್ರಾದೇಶಿಕತೆ, ಭಾಷೆ, ಬಣ್ಣ ಮುಂತಾದ ಹುಸಿ ಕಾರಣಗಳಿಂದ ವಿನಾಕಾರಣ ದ್ವೇಷವನ್ನು ಹರಡುತ್ತ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವವರ ಮೋಸದ ಮಾತುಗಳಲ್ಲಿ ನಮ್ಮನ್ನೇ ನಾವು ಬಲಿ ಕೊಡುವುದನ್ನು ನಿಲ್ಲಿಸುವ ವರ್ಷ 2021 ಆಗಬೇಕು. ಮನುಷ್ಯ ಮನುಷ್ಯರ ನಡುವೆ ಕಂದಕಗಳನ್ನು ಸೃಷ್ಟಿಸಿ ಸ್ವಂತ ಲಾಭ ಮಾಡಿಕೊಳ್ಳುತ್ತಿರುವವರ ಆಟಗಳನ್ನು ಅರ್ಥೈಸಿಕೊಂಡು ಸತ್ಯ ಮತ್ತು ಸುಳ್ಳುಗಳನ್ನು ಪರೀಕ್ಷಿಸಿ ಒಪ್ಪಿಕೊಳ್ಳಬೇಕಿದೆ. ಮನುಷ್ಯರೆಲ್ಲರೂ ಒಂದಾಗುವ ಮೂಲಕ ಮಾತ್ರವೇ ನಾವು ಮತ್ತೊಮ್ಮೆ ಸರಿಯಾದ ಜೀವನವನ್ನು ಕಟ್ಟಿಕೊಳ್ಳಲು ಸಾಧ್ಯ.

ಇನ್ನೇನು ವ್ಯಾಕ್ಸಿನ್ ಬಂತು, ಕೊರೊನಾದ ಸಂಕಷ್ಟ ತೀರುವ ಸಮಯ ಬಂತು ಅನ್ನುವಾಗಲೇ ಅದರದೇ ರೂಪಾಂತರ ಬ್ರಿಟನ್ನನ್ನು ಬೆಚ್ಚಿಸಿದೆ. ಅದರೊಡನೆ ಇಡೀ ಜಗತ್ತೇ ಮತ್ತೊಮ್ಮೆ 2020 ಪುನರಾವರ್ತನೆಗೊಳ್ಳಬಹುದು ಎಂದು ಭಯಪಡುವಂತಾಗಿದೆ. ಹಿಂದೆ ತೋರಿದ ನಿರ್ಲಕ್ಷ್ಯವನ್ನು ಮತ್ತೆ ತೋರಿದರೆ ಆಗುವ ಅಪಾಯದ ಅಂದಾಜೂ ಕೂಡ ಸಿಗುವುದಿಲ್ಲ. ಈಗ ತಾನೇ ಮತ್ತೆ ಸಾಮಾನ್ಯ ಸ್ಥಿತಿಗೆ ಮರಳುತ್ತಿರುವ ಜನಜೀವನವನ್ನು ಲಾಕಡೌನ್‌ನಿಂದ ಬಂಧಿಸುವುದೂ ಅಪಾಯವೇ. ತಲವಾರಿನ ಮೇಲಿನ ಈ ನಡಿಗೆಯನ್ನು ಜಗತ್ತು, ನಮ್ಮ ದೇಶ, ನಮ್ಮ ಜನರು ಹೇಗೆ ನಿಭಾಯಿಸಬೇಕು ಎಂಬುದನ್ನು ಯೋಚಿಸುವುದು ಈಗಿನ ತುರ್ತು. ಒಂದು ದೊಡ್ಡ ಗಂಡಾಂತರದಿಂದ ಅದೇ ಆಗ ಪಾರಾಗುತ್ತಿರುವವರ ಮುಂದೆ ಮತ್ತೊಂದು ಚಿಕ್ಕ ಅಪಾಯವೂ ಭಯಂಕರವಾಗಿ ಕಾಣಬಹುದು. ■

